# ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:14-05-2015ರ ನಡವಳಿಗಳು

## ವಿಷಯದ ಸಂಖ್ಯೆ : 33 / 2015-16

Providing Housekeeping service to various offices (Zonal Office Building EE, AEE & ARO offices, 10 Helpline centre in Yelahanka Zone of BBMP ಕಾಮಗಾರಿಯ ಟೆಂಡರ್ ಅನುಮೋದನೆ ನೀಡುವ ಬಗ್ಗೆ

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಯಲಹಂಕ ವಲಯದ ವ್ಯಾಪ್ತಿಯಲ್ಲಿ ಬರುವ ಕಂದಾಯ, ತಾಂತ್ರಿಕ, ಆರೋಗ್ಯ, ಅರಣ್ಯ, ತೋಟಗಾರಿಕೆ ಮತ್ತು ಇತರೆ ಕಛೇರಿಗಳಲ್ಲಿ ಸ್ವಚ್ಛತಾ ಕಾರ್ಯಗಳನ್ನು ನಿರ್ವಹಿಸಲು ಈ ಕೆಳಕಂಡ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ನಾಲ್ಕು ಗುತ್ತಿಗೆದಾರರು ಭಾಗವಹಿಸಿದ್ದು, ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ ಸಂ. | ಕಾಮಗಾರಿಯ ಹೆಸರು | ಗುತ್ತಿಗೆದಾರರ ಹೆಸರು | ಟೆಂಡರ್‌ಗಿಟ್ಟ ಮೊತ್ತ | ಗುತ್ತಿಗೆದಾರರು ನಮೂದಿಸಿರುವ ದರಗಳು | ಅಂದಾಜಿಗೆ ಹೋಲಿಸಲಾದ ಶೇಕಡವಾರು | ಷರಾ |
|---|---|---|---|---|---|---|
| 1 | **Providing house keeping service to various offices (Zonal office building, EE, AEE & ARO offices, 10 helpline centre in Yalahanka zone of BBMP** | ಆರ್.ಅಣ್ಣಯ್ಯ (ರೂಪ ಇಂಜಿನಿಯರಿಂಗ್ ವರ್ಕ್ಸ್) | 8161164.00 | 7693704.00 | -5.73% ಕಡಿಮೆ (ಎಲ್-1) | ಆರ್.ಅಣ್ಣಯ್ಯ (ರೂಪ ಇಂಜಿನಿಯರಿಂಗ್ ವರ್ಕ್ಸ್ ರವರ ನಮೂದಿಸಿರುವ ದರಗಳು ಅತಿ ಕಡಿಮೆಯಾಗಿದ್ದು, ಸದರಿಯವರ ದರಗಳನ್ನು ಅನುಮೋದಿಸ ಬಹುದಾಗಿದೆ). |
| 2 | | ಕೆ.ಪ್ರಭಾಕರ್ | 8161164.00 | 8795160.00 | +7.76% ಹೆಚ್ಚು (ಎಲ್-2) | |
| 3 | | ಹೇಮ್ ಸುಂದರ್ ರೆಡ್ಡಿ | 8161164.00 | 8894615.00 | +8.98% ಹೆಚ್ಚು (ಎಲ್-3) | |
| 4 | | ಆರ್.ಸತೀಶ್ (ಸತ್ಯ ಕನ್ಸ್ಟ್ರಕ್ಷನ್) | 8161164.00 | 9142704.00 | +12.02% ಹೆಚ್ಚು (ಎಲ್-4) | |

ಮೇಲ್ಕಂಡ ಟೆಂಡರ್‌ನಲ್ಲಿ ನಾಲ್ಕು ಜನ ಗುತ್ತಿಗೆದಾರರು ಭಾಗವಹಿಸಿದ್ದು, ಶ್ರೀ. ಆರ್.ಅಣ್ಣಯ್ಯ (ರೂಪ ಇಂಜಿನಿಯರಿಂಗ್ ವರ್ಕ್ಸ್‌ರವರ ನಮೂದಿಸಿರುವ ದರಗಳು ಅತಿ ಕಡಿಮೆಯಾಗಿದ್ದು (-5.73%) ಸದರಿಯವರ ದರಗಳನ್ನು ಮಾನ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ. ಈ ಸಂಬಂಧ, ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡುವ ಬಗ್ಗೆ ಅನುಮೋದನೆ ಕೋರಿ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:10-04-2015ರ ಟಿಪ್ಪಣಿ.

**ತೀರ್ಮಾನ:** "ಅನುಮೋದಿಸಿದೆ. ಟೆಂಡರ್‌ಗಿಟ್ಟ ಮೊತ್ತ ಹಾಗೂ ಗುತ್ತಿಗೆದಾರರು ನಮೂದಿಸಿರುವ ದರಗಳ ವ್ಯತ್ಯಾಸವನ್ನು ಇಡಿಗಂಟಿನಲ್ಲಿ ಇಡುವ ಷರತ್ತು ವಿಧಿಸಿದೆ".

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು

## ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:14-05-2015ರ ನಡವಳಿಗಳು

### ವಿಷಯದ ಸಂಖ್ಯೆ : 60 / 2015-16

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೃಹತ್ ಮಳೆನೀರು ಕಾಲುವೆಗಳಲ್ಲಿ ಹೂಳು ತೆಗೆಯುವ ಕಾಮಗಾರಿಗಳ ಅಂದಾಜು ಪಟ್ಟಿಗಳ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಾಜಕಾಲುವೆಗಳಿಗೆ ಸಂಬಂಧಿಸಿದಂತೆ, ಒಟ್ಟು 842.00 ಕಿ.ಮೀ ಉದ್ದದ 633 ಮಳೆ ನೀರುಗಾಲುವೆಗಳಿವೆ. ಈ ಕಾಲುವೆಗಳ ವ್ಯಾಪ್ತಿಯಲ್ಲಿ ಒಟ್ಟು 147 ತಗ್ಗು ಪ್ರದೇಶಗಳಿವೆ. ಒಟ್ಟು 147 ತಗ್ಗು ಪ್ರದೇಶಗಳ ಪೈಕಿ 24 ತಗ್ಗು ಪ್ರದೇಶಗಳಲ್ಲಿರುವ ಮಳೆ ನೀರುಕಾಲುವೆಗಳನ್ನು ನವೀಕರಣಗೊಳಿಸಿದ್ದು, ಈ ಪ್ರದೇಶಗಳಲ್ಲಿ ಮಳೆಗಾಲದಲ್ಲಿ ಮಳೆನೀರಿನ ಪ್ರವಾಹವನ್ನು ತಡೆಗಟ್ಟಲಾಗಿದೆ. 47 ತಗ್ಗು ಪ್ರದೇಶಗಳಲ್ಲಿ ಕೈಗೊಂಡಿರುವ ಮಳೆ ನೀರುಗಾಲುವೆಗಳ ನವೀಕರಣ ಕಾಮಗಾರಿಗಳಿಂದಾಗಿ ಪ್ರವಾಹವನ್ನು ಭಾಗಶಃ ತಡೆಗಟ್ಟಲಾಗಿದ್ದು, ಈ ಎಲ್ಲಾ ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ. | ವಲಯ | ಡಿಪಿಆರ್ ವರದಿಯಂತೆ ಗುರುತಿಸಲಾದ ತಗ್ಗು ಪ್ರದೇಶಗಳ ಸಂಖ್ಯೆ | ಮಳೆ ನೀರುಗಾಲುವೆಗಳ ನವೀಕರಣ ಮಾಡಿ ಮಳೆ ನೀರು ಪ್ರವಾಹವನ್ನು ತಡೆಗಟ್ಟಿರುವ ತಗ್ಗು ಪ್ರದೇಶಗಳ ಸಂಖ್ಯೆ | | | ಉಳಿಕೆ ತಗ್ಗು ಪ್ರದೇಶಗಳ ಸಂಖ್ಯೆ |
|---|---|---|---|---|---|---|
| | | | ಭಾಗಶ: | ಪೂರ್ಣ | ಒಟ್ಟು | |
| 1 | ಪೂರ್ವ ವಲಯ | 22 | 6 | - | 6 | 16 |
| 2 | ಪಶ್ಚಿಮ ವಲಯ | 10 | 3 | 3 | 6 | 4 |
| 3 | ದಕ್ಷಿಣ ವಲಯ | 11 | 1 | 2 | 3 | 8 |
| 4 | ಕೋರಮಂಗಲ ಕಣಿವೆ | 14 | 8 | 1 | 9 | 5 |
| 5 | ರಾಜರಾಜೇಶ್ವರಿ ನಗರ ವಲಯ | 11 | 5 | 5 | 10 | 1 |
| 6 | ದಾಸರಹಳ್ಳಿ ವಲಯ | 17 | - | 2 | 2 | 15 |
| 7 | ಮಹದೇವಪುರ ವಲಯ | 23 | 3 | 1 | 4 | 19 |
| 8 | ಯಲಹಂಕ ವಲಯ | 15 | 4 | 3 | 7 | 8 |
| 9 | ಬೊಮ್ಮನಹಳ್ಳಿ ವಲಯ | 24 | 17 | 7 | 24 | - |
| **Total** | | **147** | **47** | **24** | **71** | **76** |

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಅದರಲ್ಲೂ ಮುಖ್ಯವಾಗಿ ಹೊರಪ್ರದೇಶಗಳಲ್ಲಿ Santitary network ಪೂರ್ಣಗೊಂಡಿಲ್ಲದೆ ಇರುವುದರಿಂದ ಕೊಳಚೆ ನೀರನ್ನು ಅವ್ಯಾಹತವಾಗಿ ಮಳೆ ನೀರು ಕಾಲುವೆಗಳಿಗೆ ಬಿಡುತ್ತಿರುವುದು ಕಂಡು ಬಂದಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಅವಶೇಷಗಳನ್ನು ಅನಧಿಕೃತವಾಗಿ ಮಳೆ ನೀರುಕಾಲುವೆಗಳಿಗೆ ಸುರಿಯುತ್ತಿರುವುದು ಸರ್ವೇ ಸಾಮಾನ್ಯವಾಗಿದೆ. ಮಾರ್ಕೆಟ್ ಪ್ರದೇಶಗಳಲ್ಲಿ ಕೊಳೆತ ತರಕಾರಿ, ಹಣ್ಣು ಮತ್ತು ಮಾಂಸ ಮುಂತಾದ ತ್ಯಾಜ್ಯ ವಸ್ತುಗಳನ್ನು ಮಳೆ ನೀರು ಕಾಲುವೆಗೆ ಸುರಿಯುವುದು ಸಾರ್ವಜನಿಕರಿಗೆ ಅಭ್ಯಾಸವಾಗಿದೆ. ಮುಂದುವರೆದು ಕೆಲವು ಭಾಗಗಳಲ್ಲಿ ಮಳೆನೀರು ಕಾಲುವೆಗಳು ಅನಧಿಕೃತವಾಗಿ ಒತ್ತುವರಿಯಾಗಿ ಕಾಲುವೆಯ ವಿಸ್ತೀರ್ಣ ಕಡಿಮೆಯಾಗಿದೆ. ಈ ಎಲ್ಲಾ ಕಾರಣಗಳಿಂದ ಮಳೆಗಾಲದಲ್ಲಿ ತಗ್ಗು ಪ್ರದೇಶಗಳಲ್ಲಿ ಪ್ರವಾಹ ಉಂಟಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಇಂತಹ ಸಂಭವನೀಯ ಪ್ರವಾಹ ಉಂಟಾಗಬಹುದಾದ ಸ್ಥಳಗಳಲ್ಲಿನ ಮಳೆ ನೀರುಕಾಲುವೆಗಳನ್ನು ಗುರುತಿಸಿ, ಕಾಲುವೆಗಳಲ್ಲಿನ ಹೂಳು ತೆಗೆಯಲು ಮೆ॥ ಪ್ರೀತಿಕ್ಯಾಡ್ ಕನ್ಸಲ್ಟೆಂಟ್ ರವರ ಸಹಯೋಗದೊಂದಿಗೆ ವಲಯವಾರು ಅಂದಾಜು ಪಟ್ಟಿಗಳನ್ನು ತಯಾರಿಸಿದ್ದು, ವಿವರಗಳು ಕೆಳಕಂಡಂತಿವೆ.

| ಕ್ರ.ಸಂ. | ವಲಯ | ಡಿಪಿಆರ್ ವರದಿಯಂತೆ ಗುರುತಿಸಲಾದ ತಗ್ಗು ಪ್ರದೇಶಗಳ ಸಂಖ್ಯೆ | ಷರಾ |
|---|---|---|---|
| 1 | ಪೂರ್ವ ವಲಯ | | |
| | ಹೆಬ್ಬಾಳ ಕಣಿವೆ | 350.96 | |
| | ಛಲಘಟ್ಟ ಕಣಿವೆ | 261.38 | |
| 2 | ಪಶ್ಚಿಮ ವಲಯ | 199.64 | |
| 3 | ದಕ್ಷಿಣ ವಲಯ | 385.00 | |
| 4 | ಕೋರಮಂಗಲ ಕಣಿವೆ | | |
| 5 | ರಾಜರಾಜೇಶ್ವರಿ ನಗರ ವಲಯ | 486.00 | |
| 6 | ದಾಸರಹಳ್ಳಿ ವಲಯ | 41.00 | |
| 7 | ಮಹದೇವಪುರ ವಲಯ | 105.00 | |
| 8 | ಯಲಹಂಕ ವಲಯ | 46.20 | |
| 9 | ಬೊಮ್ಮನಹಳ್ಳಿ ವಲಯ | 130.00 | |
| **Total** | | **2005.18** | |
| | | **ಅಥವಾ 20.05 ಕೋಟಿ** | |

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ ಈ ಕೆಳಗಿನಂತೆ ಅನುಮೋದನೆ ಕೋರಿದೆ.

1) ರೂ.20.05 ಕೋಟಿ ಮೊತ್ತದ ಹೂಳೆತ್ತುವ ಕಾಮಗಾರಿಗಳ 9 ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಮಂಜೂರಾತಿ, ಕಾಮಗಾರಿ ಸಂಕೇತ ನೀಡಲು ಅನುಮೋದನೆ.

ಮೇಲ್ಕಂಡಂತೆ ವಲಯವಾರು ತಯಾರಿಸಿರುವ ಹೂಳೆತ್ತುವ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಅನುದಾನ ಒದಗಿಸಿ, ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:14–05–2015ರ ಟಿಪ್ಪಣಿ.

**ತೀರ್ಮಾನ: "ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು